**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**
**ಬೆಂಗಳೂರು-560 001**
**ಅಧಿಸೂಚನೆ ಸಂಖ್ಯೆ: ಎಸ್/03/1, ದಿನಾಂಕ ಡಿಸೆಂಬರ್ 20, 2011**

**ಕವಿನಿಆ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ)(ಮೊದಲ ತಿದ್ದುಪಡಿ)ನಿಯಮಾವಳಿಗಳು, 2011**

**ಪೀಠಿಕೆ**

ವಿದ್ಯುಚ್ಛಕ್ತಿ ಕಾಯಿದೆ 2003ರ(2003ರ ಕೇಂದ್ರೀಯ ಕಾಯಿದೆ 36) ಪರಿಚ್ಛೇದ 86ರ ಉಪಪರಿಚ್ಛೇಧ(1)ರ ಕಲಮು (ಇ) ಹಾಗೂ ಪರಿಚ್ಛೇದ 181ರ ಅಡಿಯಲ್ಲಿ ಮತ್ತು ಇದರ ಪರವಾಗಿ ದತ್ತವಾದ ಇತರ ಎಲ್ಲ ಅಧಿಕಾರಗಳ ಪ್ರಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅಧಿಸೂಚನೆ ಸಂಖ್ಯೆ ಎಸ್/03/1, ದಿನಾಂಕ 16.03.2011ರ ಮೂಲಕ, ಕವಿನಿಆ(ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ)ನಿಯಮಾವಳಿಗಳು, 2011ನ್ನು [ಮೂಲ ನಿಯಮಾವಳಿ ಎಂದು ಇಲ್ಲಿ ಕರೆಯಲ್ಪಟ್ಟಿದೆ] ಹೊರಡಿಸಿ, ಅದನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 31.03.2011 ಪ್ರಕಟಪಡಿಸಿತ್ತು.

ಆಯೋಗವು, ದಿನಾಂಕ 30.05.2011ರಂದು ಹೊರಡಿಸಿದ ಅದಿಸೂಚನೆಯಲ್ಲಿ, ಮೂಲ ನಿಯಮಾವಳಿಗಳಿಗೆ ಕೆಲವು ತಿದ್ದುಪಡಿಗಳನ್ನು ಪ್ರಸ್ತಾಪಿಸಿ, ಆಸಕ್ತ ವ್ಯಕ್ತಿಗಳಿಂದ ಅಭಿಪ್ರಾಯ/ಸಲಹೆಗಳನ್ನು ಆಹ್ವಾನಿಸಿತ್ತು. ಸರ್ಕಾರ ಹಾಗೂ ವಿತರಣಾ ಲೈಸೆನ್ಸುದಾರರನ್ನೂ ಒಳಗೊಂಡಂತೆ, ಹತ್ತೊಂಭತ್ತು ವ್ಯಕ್ತಿಗಳು ಲಿಖಿತ ಅಭಿಪ್ರಾಯಗಳನ್ನು ಸಲ್ಲಿಸಿದ್ದರು. ದಿನಾಂಕ 23.08.2011ರಂದು ಸಾರ್ವಜನಿಕ ಆಲಿಕೆಯನ್ನು ನಡೆಸಿ, ಅಭಿಪ್ರಾಯ/ಸಲಹೆಗಳನ್ನು ಯುಕ್ತ ರೀತಿಯಲ್ಲಿ ಪರಿಗಣಿಸಿ, ಆಯೋಗವು ಹಾಲಿ ಇರುವ ನಿಯಮಾವಳಿಗಳಿಗೆ ಕೆಳಕಂಡಂತೆ ತಿದ್ದುಪಡಿಗಳನ್ನು ತಂದಿದೆ:

**ಕವಿನಿಆ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ)(ಮೊದಲ ತಿದ್ದುಪಡಿ)ನಿಯಮಾವಳಿಗಳು, 2011**

**1. ಕಿರುಶೀರ್ಷಿಕೆ, ಅನ್ವಯಿಸುವಿಕೆ ಹಾಗೂ ಪ್ರಾರಂಭ:-**

(i) ಈ ನಿಯಮಾವಳಿಗಳನ್ನು ಕವಿನಿಆ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ)(ಮೊದಲ ತಿದ್ದುಪಡಿ)ನಿಯಮಾವಳಿಗಳು, 2011 ಎಂದು ಕರೆಯಲಾಗುತ್ತದೆ.

(ii) ಈ ನಿಯಮಾವಳಿಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

(iii) ಈ ನಿಯಮಾವಳಿಗಳು ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

**2. ಕಲಮು-2ರಲ್ಲಿ ಇರುವ ಹಾಲಿ ಖಂಡ, ಉಪಖಂಡ ಹಾಗೂ ನಿಯಮಗಳನ್ನು ಕಲಮು-3ರಲ್ಲಿ ಇರುವ ಖಂಡ, ಉಪಖಂಡ ಹಾಗೂ ನಿಯಮಗಳಿಂದ ಬದಲಾಯಿಸತಕ್ಕದ್ದು:-**

| ಕಲಮು-1<br>ಖಂಡ ಸಂಖ್ಯೆ | ಕಲಮು-2<br>ಹಾಲಿ ಇರುವ ನಿಯಮಾವಳಿ | ಕಲಮು-3<br>ತಿದ್ದುಪಡಿ |
|---|---|---|
| 3(ii) | ನವೀಕರಿಸಬಹುದಾದ ಮೂಲಗಳಿಂದ ಹೊರತುಪಡಿಸಿ ಬೇರೆ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ 5-ಮೆಗಾ ವಾಟ್‌ಗಿಂತ ಹೆಚ್ಚಿನ ಒಟ್ಟು ಸಾಮರ್ಥ್ಯವನ್ನು ಹೊಂದಿರುವ ಕ್ಯಾಪ್ಟಿವ್ ಸ್ಥಾವರ ಅಥವಾ ಸ್ಥಾವರಗಳಿಂದ ವಿದ್ಯುತ್ತನ್ನು ಪಡೆಯುತ್ತಿರುವ ಯಾವುದೇ ವ್ಯಕ್ತಿ ಮತ್ತು | ನವೀಕರಿಸಬಹುದಾದ ಮೂಲಗಳಿಂದ ಹೊರತುಪಡಿಸಿ ಬೇರೆ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಗ್ರಿಡ್ ಜಾಲದ ಸಂಪರ್ಕವಿರುವ ಹಾಗೂ 5-ಮೆಗಾ ವಾಟ್‌ಗಿಂತ ಹೆಚ್ಚಿನ ಒಟ್ಟು ಸಾಮರ್ಥ್ಯವನ್ನು ಹೊಂದಿರುವ ಕ್ಯಾಪ್ಟಿವ್ ಸ್ಥಾವರ ಅಥವಾ ಸ್ಥಾವರಗಳಿಂದ ವಿದ್ಯುತ್ತನ್ನು ಪಡೆಯುತ್ತಿರುವ ಯಾವುದೇ ವ್ಯಕ್ತಿ ಮತ್ತು |

| | | |
|---|---|---|
| 4(i) | ಆದರೆ, ಕರ್ನಾಟಕ ರಾಜ್ಯದಲ್ಲಿ ಸೌರಶಕ್ತಿ ಮೂಲದಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ ಲಭ್ಯತೆ ಇಲ್ಲದಿದ್ದಲ್ಲಿ, ವಿತರಣ ಲೈಸೆನ್ಸುದಾರರು ಆ ವರ್ಷದ ತಮ್ಮ ಆರ್.ಪಿ.ಒ.ದ ಕೊರತೆಯ ಪ್ರಮಾಣದಷ್ಟು ವಿದ್ಯುತ್ತನ್ನು ಇತರ ನವೀಕರಿಸಬಹುದಾದ ಮೂಲಗಳಿಂದ ಅಥವಾ ಆರ್.ಇ.ಸಿ.ಯ ಮೂಲಕ ಖರೀದಿಸಬಹುದಾಗಿದೆ | ತ್ಯಜಿಸಲಾಗಿದೆ |
| 5 | ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರ(ಆರ್.ಇ.ಸಿ)– ಮೇಲಿನ ಕಲಮು (3) ರಲ್ಲಿ ಸೂಚಿಸಿರುವ ವಿತರಣ ಲೈಸೆನ್ಸುದಾರರು, ಕ್ಯಾಪ್ಟಿವ್ ವಿದ್ಯುತ್ ಖರೀದಿ ಗ್ರಾಹಕರು ಹಾಗೂ ಮುಕ್ತ ವಿದ್ಯುತ್ ಖರೀದಿ ಗ್ರಾಹಕರು, ಮೇಲಿನ ಕಲಮು4(1)ರಲ್ಲಿ ತಿಳಿಸಿರುವಂತೆ ಆರ್.ಪಿ.ಒ.ವನ್ನು ಹೋಂದಲು, ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಆರ್.ಇ.ಸಿ.ಯನ್ನು ಖರೀದಿಸಬಹುದಾಗಿದೆ. | ನವೀಕರಿಸಬಹುದಾದ ಇಂಧನ ದೃಢೀಕರಣ ಪತ್ರ(ಆರ್.ಇ.ಸಿ)– ಮೇಲಿನ ಕಲಮು (3)ರಲ್ಲಿ ಸೂಚಿಸಿರುವ ವಿತರಣ ಲೈಸೆನ್ಸುದಾರರು, ಕ್ಯಾಪ್ಟಿವ್ ವಿದ್ಯುತ್ ಖರೀದಿ ಗ್ರಾಹಕರು ಹಾಗೂ ಮುಕ್ತ ವಿದ್ಯುತ್ ಖರೀದಿ ಗ್ರಾಹಕರು, ಕ್ರಮವಾಗಿ ಮೇಲಿನ ಕಲಮು4(i), 4(ii), ಹಾಗೂ 4(iii),ರಲ್ಲಿ ತಿಳಿಸಿರುವಂತೆ ಆರ್.ಪಿ.ಒ.ವನ್ನು ಹೋಂದಲು, ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಆರ್.ಇ.ಸಿ.ಯನ್ನು ಖರೀದಿಸಬಹುದಾಗಿದೆ.<br><br>ಆದರೆ, ವಿತರಣ ಲೈಸೆನ್ಸುದಾರರು, ತಾವು ಸೌರ ಶಕ್ತಿಯಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ತನ್ನು ಖರೀದಿಸಬೇಕಾದ ತಮ್ಮ ಹೊಣೆಗಾರಿಕೆಯನ್ನು ಸೌರಶಕ್ತಿ ಆರ್.ಇ.ಸಿ.ಖರೀದಿಯ ಮೂಲಕವೇ ಪೂರೈಸಿಕೊಳ್ಳತಕ್ಕದ್ದು. |
| 7(ಸಿ) | ಆರ್.ಇ.ಸಿ. ಯೋಜನೆಯನ್ನು ಇಚ್ಛಿಸುವ ವಿದ್ಯುತ್ ಉತ್ಪಾದನಾ ಕಂಪನಿಯು, ತಾನು ಉತ್ಪಾದಿಸಿದ ವಿದ್ಯುತ್ತನ್ನು, ಆಯೋಗವು ತನ್ನ ದರ ಆದೇಶದಲ್ಲಿ ಹಿಂದಿನ ವರ್ಷಕ್ಕೆ ನಿಗದಿಪಡಿಸಿದ ಒಟ್ಟುಗೂಡಿಸಿದ ವಿದ್ಯುತ್ ಖರೀದಿ ವೆಚ್ಚವನ್ನು ಹಣದುಬ್ಬರದ ಪ್ರಮಾಣದಲ್ಲಿ ಹೆಚ್ಚಿಸಿದ ದರದಲ್ಲಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೇ ಮಾರಾಟ ಮಾಡತಕ್ಕದ್ದು. | ಆರ್.ಇ.ಸಿ. ಯೋಜನೆಯನ್ನು ಇಚ್ಛಿಸುವ ವಿದ್ಯುತ್ ಉತ್ಪಾದನಾ ಕಂಪನಿಯು, ತಾನು ಉತ್ಪಾದಿಸಿದ ವಿದ್ಯುತ್ತನ್ನು, ಆಯೋಗವು ಕಾಲಕಾಲಕ್ಕೆ ನಿಗದಿಪಡಿಸುವ ಒಟ್ಟುಗೂಡಿಸಿದ ವಿದ್ಯುತ್ ಖರೀದಿ ದರದಲ್ಲಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೇ ಮಾರಾಟ ಮಾಡತಕ್ಕದ್ದು<br><br>ವಿವರಣೆ:–<br>ಈ ನಿಯಮಾವಳಿಗಳ ಉದ್ದೇಶಕ್ಕಾಗಿ, ವಿದ್ಯುತ್ ಖರೀದಿಯ ಒಟ್ಟುಗೂಡಿಸಿದ ವೆಚ್ಚ ಎಂದರೆ, ರಾಜ್ಯ ವಿತರಣ ಲೈಸೆನ್ಸುದಾರರು ಒಟ್ಟುಗೂಡಿ ಹಿಂದಿನ ವರ್ಷದಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಆಧಾರದ ಮೇಲೆ ಎಲ್ಲಾ ವಿದ್ಯುತ್ ಸರಬರಾಜುದಾರರಿಂದ ಖರೀದಿಸಿದ, ಇರಬಹುದಾದ ಸ್ವಂತ ವಿದ್ಯುತ್ ಉತ್ಪಾದನೆಯ ವೆಚ್ಚವನ್ನೂ ಒಳಗೊಂಡಂತೆ, ಆದರೆ, ನವೀಕರಿಸಬಹುದಾದ ವಿದ್ಯುತ್ ಮೂಲಗಳಿಂದ ಖರೀದಿಸಿದ ವಿದ್ಯುತ್ತನ್ನು ಹೊರತುಪಡಿಸಿ, ಒಟ್ಟುಗೂಡಿಸಿದ ಸರಾಸರಿ ದರ ಎಂದರ್ಥ. |

ಆಯೋಗದಿಂದ ಅನುಮೋದಿಸಲ್ಪಟ್ಟಿದೆ

ಸಹಿ

ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ